

# 'ವಿವೇಕಪ್ರಭ' ಪತ್ರಿಕೆಯ ಮಹದುದ್ದೇಶಗಳು




1. ಉನ್ನತ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಜನರಲ್ಲಿ ಹರಡುವುದು.
2. ಕೌಟುಂಬಿಕ ಮೌಲ್ಯಗಳನ್ನು ಪುನಃ ಸ್ಥಾಪಿಸುವುದು.
3. ನಮ್ಮ ಸಾಂಸ್ಕೃತಿಕ ನೆಲೆಯಲ್ಲಿ ಪುನಃ ನಮ್ಮ ಸಮಾಜವನ್ನು ಪ್ರತಿಷ್ಠಾಪಿಸುವುದು.
4. ನಮ್ಮ ವ್ಯಕ್ತಿತ್ವವನ್ನು ನೈತಿಕ ಮತ್ತು ಆಧ್ಯಾತ್ಮಿಕ ತಳಹದಿಯ ಮೇಲೆ ನಿರ್ಮಿಸುವುದು.
5. ಪರಸ್ಪರ ನಂಬಿಕೆ, ಪ್ರೀತಿ, ಸಹಾನುಭೂತಿ, ಸಹಬಾಳ್ವೆ ಇತ್ಯಾದಿ ಗುಣಗಳ ಅನಿವಾರ್ಯತೆಯನ್ನು ಒತ್ತಿ ಸಾರುವುದು.




## 'ವಿವೇಕಪ್ರಭ' ಪತ್ರಿಕೆಯ ಪ್ರಸಾರಕ್ಕೆ ನೀವೇನು ಮಾಡಬಹುದು?

1. 'ವಿವೇಕಪ್ರಭ' ದ ಆಜೀವ ಅಥವಾ ಪೋಷಕ ಚಂದಾದಾರರಾಗಿರಿ.
2. ಸುಮಾರು 5,000 ಶಾಲಾಕಾಲೇಜುಗಳಿಗೆ 'ವಿವೇಕಪ್ರಭ' ವನ್ನು ತಲುಪಿಸುವ 'ವಿವೇಕದೀಕ್ಷೆ' ಯೋಜನೆಗೆ ಉದಾರ ಧನಸಹಾಯ ಮಾಡಿರಿ.
3. ನಿಮ್ಮ ಬಂಧುಬಾಂಧವರಿಗೆ, ಸ್ನೇಹಿತರಿಗೆ ಮತ್ತು ಸುತ್ತಮುತ್ತಲ ಶೈಕ್ಷಣಿಕ ಮತ್ತು ಧಾರ್ಮಿಕ ಸಂಸ್ಥೆಗಳಿಗೆ 'ವಿವೇಕಪ್ರಭ' ಪತ್ರಿಕೆಯ ಚಂದಾವನ್ನು ಮಾಡಿಸಿ.
4. 'ವಿವೇಕಪ್ರಭ' ಪತ್ರಿಕೆಗೆ ಹೆಚ್ಚು ಹೆಚ್ಚು ಜಾಹೀರಾತುಗಳನ್ನು ಸಂಗ್ರಹಿಸಿಕೊಡಿ.

**ಚಂದಾ ಕಳಿಸುವುದಕ್ಕೆ ಮತ್ತು ಚಂದಾ ಕೊಡುಗೆ ನೀಡಲು ಈ ಕೆಳಕಂಡ ಅರ್ಜಿಫಾರಂ ಉಪಯೋಗಿಸಿ.**

---

# ವಿವೇಕಪ್ರಭ

**ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ**

**ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ ಕಾರ್ಯಾಲಯ. ಯಾದವಗಿರಿ, ಮೈಸೂರು 570 020**

## ಚಂದಾ ಅರ್ಜಿ

ಮಾನ್ಯರೇ, (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

☐ ನನ್ನನ್ನು / ಈ ಕೆಳಕಂಡ ಹೆಸರಿನವರನ್ನು 'ವಿವೇಕಪ್ರಭ' ಪತ್ರಿಕೆಯ ಚಂದಾದಾರರನ್ನಾಗಿ/ಪೋಷಕರನ್ನಾಗಿ ಮಾಡಬೇಕಾಗಿ ವಿನಂತಿ.

☐ ನನ್ನ/ ಕೆಳಕಂಡ ಹೆಸರಿನವರ ಚಂದಾವನ್ನು ನವೀಕರಿಸಬೇಕಾಗಿ ವಿನಂತಿ. **ಈಗಿನ ಚಂದಾಸಂಖ್ಯೆ**..........................

**ನನ್ನ ವಿಳಾಸ**

ಹೆಸರು..................................................................

ವಿಳಾಸ..................................................................

..........................................................................

..............................................ಪಿನ್ ........................

**ಪತ್ರಿಕೆ ಪಡೆಯುವವರ ವಿಳಾಸ**

ಹೆಸರು..................................................................

ವಿಳಾಸ..................................................................

..........................................................................

..............................................ಪಿನ್ ........................

ಚಂದಾ ವಿವರ: (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

| 1 ವರ್ಷದ ಚಂದಾ | 3 ವರ್ಷದ ಚಂದಾ | ಆಜೀವ ಚಂದಾ | ಪೋಷಕರ ಸಹಾಯಧನ |
|---|---|---|---|
| ₹ 100 | ₹ 250 | ₹ 1500 | ₹ 3000 |

ಹಣವನ್ನು ಮನಿ ಆರ್ಡರ್ / ಡ್ರಾಫ್ಟ್ (ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ A/c ನ ಹೆಸರಿನಲ್ಲಿ) ಮೂಲಕ ಕಳುಹಿಸುತ್ತಿದ್ದೇನೆ.

ವಿವರ.......................................................................................

1. ಹೊರ ಊರಿನ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
2. ವಿದೇಶಗಳಿಗೆ ಅನ್ವಯವಾಗುವ ಚಂದಾ ವಿವರಗಳಿಗೆ ಹಾಗೂ ಇತರ ವಿವರಗಳಿಗಾಗಿ ನಮಗೆ ಬರೆಯಿರಿ.

ಸಹಿ

ಡಾ.ಕೆ. ಅನಂತರಾಮು



# ಪುಷ್ಪ ೧೨ – ಸ್ವಾಮಿ ಸುಬೋಧಾನಂದ

ಸುಬೋಧ ಎಂದರೆ ಒಳ್ಳೆಯ ಉಪದೇಶ ಎಂದರ್ಥ. ಅಂತಹ ಒಳ್ಳೆಯ ಉಪದೇಶವನ್ನು ಪಡೆದುಕೊಂಡವರು ಸುಬೋಧರು ಎನಿಸಿಕೊಳ್ಳುತ್ತಾರೆ. ಸುಬೋಧವೇ ಆನಂದಮಯ, ಸುಬೋಧರೇ ಆನಂದದಾಯಕರು. ಸ್ವಾಮಿ ಸುಬೋಧಾನಂದರು ಪರಮಹಂಸರ ಪ್ರೇಮದ ಕೂಸಾಗಿ, ಅವರಿಂದ ಸದುಪದೇಶಗಳನ್ನು ಪಡೆದುಕೊಂಡು, ತನ್ಮೂಲಕ ಲೋಕಕಲ್ಯಾಣವನ್ನೂ ಆತ್ಮಕಲ್ಯಾಣವನ್ನೂ ಸಾಧಿಸಿದ ಜೀವನ್ಮುಕ್ತರು. ಸುಬೋಧಾನಂದರಿಗೆ ಹುಟ್ಟುಹೆಸರು ಒಂದು, ಸಂನ್ಯಾಸಾಶ್ರಮನಾಮವು ಮತ್ತೊಂದು ಎಂಬಂತಾಗದೆ ಎರಡೂ ಒಂದರಲ್ಲೊಂದು ಕರಗಿಹೋದುವು. ಹುಟ್ಟಿನಿಂದಲೇ ಭಕ್ತಿಜ್ಞಾನವೈರಾಗ್ಯಗಳು ಅವರಿಗೆ ಭಗವಂತನಿಂದ ಬಳುವಳಿಯಾಗಿ ಬಂದಿದ್ದುವು. ಅವರು ಪರಮಹಂಸರ ಹೂದೋಟದ ತುಂಬೆಯ ಹೂವಿನಹಾಗೆ. ಅದು ಪವಿತ್ರವಾದ ಕಿರುಕುಸುಮ, ಪರಶಿವನಿಗೆ ಪ್ರಿಯವಾದ ಕುಸುಮ. ಹಾಗೆಂದೇ ಆ ಸದ್ಗುರುನಾಥರು ಅದನ್ನು ಮಮತೆಯಿಂದ ಮುಡಿಗೇರಿಸಿಕೊಂಡುಬಿಟ್ಟರು.

**ನೀನು ನನ್ನವನೇ ಆಗಿದ್ದೀಯೆ:** ಸ್ವಾಮಿ ಸುಬೋಧಾನಂದರು ಪಶ್ಚಿಮಬಂಗಾಳದ ಕೇಂದ್ರಮಹಾನಗರಿಯಾದ ಕೊಲ್ಕೊತ್ತೆಯ ಕೃಷ್ಣದಾಸಘೋಷ್ ಮತ್ತು ನಯನತಾರಾ ಎಂಬ ಧರ್ಮಶೀಲ ದಂಪತಿಗಳ ಪುತ್ರನಾಗಿ ೧೮೬೭ ರ ನವಂಬರ್ ೮ ರಂದು ಅವತರಿಸಿದರು. ಸುಬೋಧಚಂದ್ರಘೋಷ್ ಎಂದು ಅವರಿಗೆ ನಾಮಕರಣವಾಯಿತು. ಕೊಲ್ಕೊತ್ತೆಯ ತಂಥಾನಿಯಾ ಎಂಬಲ್ಲಿದ್ದ ಸಿದ್ಧೇಶ್ವರಿಕಾಳಿಗೆ ಕೃಷ್ಣದಾಸರು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಅದು ಅವರ ಕುಟುಂಬಕ್ಕೆ ಸೇರಿದ ದೇವಾಲಯವಾಗಿತ್ತು. ಕೃಷ್ಣದಾಸರು ಬ್ರಹ್ಮಸಮಾಜದ ಭಕ್ತರಾಗಿದ್ದುಕೊಂಡು, ತಮ್ಮ ಮಕ್ಕಳನ್ನು ಅಲ್ಲಿನ ಕಾರ್ಯಕ್ರಮಗಳಿಗೆ ಕರೆದೊಯ್ಯುತ್ತಿದ್ದರು; ಅಲ್ಲಿನ ಪುಸ್ತಕಗಳನ್ನು ಅವರಿಗೆ ಕೊಡಿಸುತ್ತಿದ್ದರು. ತಾಯಿ ನಯನತಾರೆಯು ರಾತ್ರಿಯ ವೇಳೆಯಲ್ಲಿ ಮಕ್ಕಳನ್ನು ಕೂರಿಸಿಕೊಂಡು ರಾಮಾಯಣ, ಮಹಾಭಾರತ ಮತ್ತು ಭಾಗವತಪುರಾಣದ ಬೋಧಪ್ರದ ಕಥೆಗಳನ್ನು ಹೃದ್ಯವಾಗಿ ಬಿತ್ತರಿಸುತ್ತಿದ್ದಳು. ಅವುಗಳನ್ನು ಕೇಳುವಾಗ ಸುಬೋಧಾನಂದರಿಗೆ ಮನದಾಳದಲ್ಲಿ, "ನಾನು ಮದುವೆಯಾಗುವುದಿಲ್ಲ, ಸಂನ್ಯಾಸಿಯಾಗಿ ದೇಶದೇಶ ಸುತ್ತುತ್ತೇನೆ" ಎಂಬ ಭಾವನೆ ಉಕ್ಕಿಬರುತ್ತಿತ್ತು. ಅವರು ಕೊಲ್ಕತ್ತೆಯ ಶಾಲೆಗಳಲ್ಲಿ ಓದುತ್ತಾ ಎಂಟನೇ ತರಗತಿಯವರೆಗೂ ಬಂದರು.

ಒಮ್ಮೆ ಕೃಷ್ಣದಾಸರು ತಮ್ಮ ಮಗನಿಗೆ **'ಶ್ರೀ ಶ್ರೀ ರಾಮಕೃಷ್ಣ ಪರಮಹಂಸೇರ್ ಉಕ್ತಿ'** ಎಂಬ ಬಂಗಾಳಿಭಾಷೆಯ ಹೊತ್ತಗೆಯೊಂದನ್ನು ಓದಲು ತಂದುಕೊಟ್ಟರು. ಅದು ಸುಬೋಧಾನಂದರ ಮೇಲೆ ಅಪೂರ್ವವಾದ ಪ್ರಭಾವವನ್ನುಂಟುಮಾಡಿತು. "ನಾನು ಆ ಮಹಾಪುರುಷರನ್ನು ಕಾಣಲೇಬೇಕು, ಅವರೊಡನೆ ಮಾತನಾಡಲೇಬೇಕು" ಎಂಬ ಅದಮ್ಯವಾದ ಆಕಾಂಕ್ಷೆ ಅವರಲ್ಲಿ ಕುಡಿಯೊಡೆಯಿತು. ೧೮೮೫ ರ ಆಗಸ್ಟ್ ತಿಂಗಳ ಒಂದು ದಿನ ಸುಬೋಧಾನಂದರು

ದಕ್ಷಿಣೇಶ್ವರವನ್ನು ಮುಟ್ಟಿ ಪರಮಹಂಸರ ದರ್ಶನ ಪಡೆದುಕೊಂಡರು. ಮೊದಲ ನೋಟದಲ್ಲಿಯೇ ಅವರು ಒಬ್ಬರಿಗೊಬ್ಬರು ಬೇಕಾದವರಾಗಿಬಿಟ್ಟರು. ಸುಬೋಧಾನಂದರನ್ನು ಹತ್ತಿರ ಕರೆದು ಕೂರಿಸಿಕೊಂಡು ಪರಮಹಂಸರು, "ನಾನು ಜಾಂಪುಕುರದಲ್ಲಿದ್ದಾಗ ನಿಮ್ಮ ಮನೆಗೆ ಬರುತ್ತಿದ್ದೆ, ನಿಮ್ಮ ಕುಟುಂಬದ ಕಾಳಿಮಾತೆಯ ಗುಡಿಗೂ ಬರುತ್ತಿದ್ದೆ. ಜಗನ್ಮಾತೆಯೇ ನಿನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾಳೆ. ನೀನು ಇಲ್ಲಿಗೇ ಸೇರಿದವನು" ಎಂದು ಆತ್ಮೀಯವಾಗಿ ಹೇಳಿದರು. ಆಗ ಸುಬೋಧಾನಂದನು "ನಾನು ಇಲ್ಲಿಗೇ ಸೇರಿದವನಾದರೆ, ನೀವು ಈ ಮೊದಲೇ ನನ್ನನ್ನು ಇಲ್ಲಿಗೇಕೆ ಕರೆಸಿಕೊಳ್ಳಲಿಲ್ಲ" ಎಂದು ಪ್ರಶ್ನಿಸಿದರು. ಅದಕ್ಕೆ ಪರಮಹಂಸರು "ಯಾವುದೇ ಕಾರ್ಯ ನೆರವೇರಬೇಕಾದರೂ ಕಾಲ ಕೂಡಿಬರಬೇಕಲ್ಲವೇ ಮಗುವೇ" ಎಂದರು.

ಆ ಬಳಿಕ ಪರಮಹಂಸರು ಸುಬೋಧಾನಂದರ ಕೈಹಿಡಿದುಕೊಂಡು, ಕೆಲವು ನಿಮಿಷ ಕಣ್ಣುಮುಚ್ಚಿ ಮೌನವಾಗಿದ್ದು ತರುವಾಯ "ನೀನು ನನ್ನವನೇ ಆಗಿದ್ದೀಯೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ನೀನು ನಿಶ್ಚಿತಗುರಿಯನ್ನು ಮುಟ್ಟಿಯೇ ತೀರುತ್ತೀಯೆಂದು ಜಗನ್ಮಾತೆಯೇ ಹೇಳುತ್ತಿದ್ದಾಳೆ" ಎಂದು ಪ್ರೀತ್ಯಾದರಗಳಿಂದ ಹೇಳುತ್ತ, ಅವರ ಸಂಕೋಚವನ್ನು ತೊಲಗಿಸಿ, ಆಗಲೇ ತಮ್ಮವನನ್ನಾಗಿ ಮಾಡಿಕೊಂಡುಬಿಟ್ಟರು. ಮುಗ್ಧಸ್ವಭಾವದ, ನೇರವಾದ ನಡೆವಳಿಕೆಯ ಮಗುವಿನಂತಹ ನಿರ್ಮಲ ಮನಸ್ಸಿನ ಸುಬೋಧಾನಂದರನ್ನು ಪರಮಹಂಸರು ಪ್ರೇಮದಿಂದ 'ಖೋಕ' ಎಂದು ಕರೆಯುತ್ತಿದ್ದರು. ಬಂಗಾಳಿ ಭಾಷೆಯಲ್ಲಿ 'ಖೋಕ' ಎಂದರೆ ಮಗು ಎಂದರ್ಥ. ಪರಮಹಂಸರಿತ್ತ ಆ ಬಿರುದಿನ ಬಲದಿಂದಲೇ ಅವರು ಆ ಮಠ ಪರಂಪರೆಯಲ್ಲಿ 'ಖೋಕಾ ಮಹಾರಾಜ್' ಎಂದೇ ಕರೆಯಲ್ಪಟ್ಟರು.

**ನಾಲಗೆಯ ಮೇಲೆ ಮಂತ್ರಾಕ್ಷರ:** ಮತ್ತೊಂದು ದಿನ ಸುಬೋಧಾನಂದರು ದಕ್ಷಿಣೇಶ್ವರಕ್ಕೆ ಹೋದಾಗ ಪರಮಹಂಸರು ಅವರನ್ನು ಪದ್ಮಾಸನದಲ್ಲಿ ಕೂರಿಸಿದರು. ನಾಲಗೆಯನ್ನು ಹೊರಕ್ಕೆ ಚಾಚಿಸಿದರು. ಅಂಗಿಯ ಗುಂಡಿಗಳನ್ನು ಬಿಚ್ಚಿಸಿದರು. ಬಲಗೈ ತೋರುಬೆರಳಿನಿಂದ ಅವರ ನಾಲಗೆಯ ಮೇಲೆ ಪವಿತ್ರ ಮಂತ್ರಾಕ್ಷರಗಳನ್ನು ಬರೆದರು. ಆಮೇಲೆ ಅವರ ಶರೀರವನ್ನು ಹೊಕ್ಕುಳಿನಿಂದ ಪ್ರಾರಂಭಿಸಿ ತಲೆಯವರೆಗೆ ಮೃದುವಾಗಿ ತಟ್ಟುತ್ತಾ "ಎಚ್ಚರಾಗು ತಾಯೆ ಎಚ್ಚರಾಗು" ಎಂದು ನುಡಿದರು.

ಅಷ್ಟಾಗುತ್ತಿದ್ದಂತೆಯೇ ಸುಬೋಧಾನಂದರು ಧ್ಯಾನಸ್ಥರಾಗಿಬಿಟ್ಟರು. ಅವರ ದೇಹವೆಲ್ಲವೂ ಕಂಪನಕ್ಕೆ ತುತ್ತಾಯಿತು. ಬೆನ್ನುಹುರಿಯ ಮೂಲಕ ಶಕ್ತಿಯ ಪ್ರವಾಹವೇ ಭೋರ್ಗರೆಯುತ್ತ ಮೆದುಳಿನ ಕಡೆಗೆ ಹರಿದುಹೋಗುತ್ತಿರುವಂತೆ ಭಾಸವಾಯಿತು. ಅದು ಕುಂಡಲಿನಿಯು ಜಾಗೃತವಾದಾಗ ಉಂಟಾಗುವ ಅನುಭವವೆಂದು ಬಲ್ಲವರು ಹೇಳುತ್ತಾರೆ. ಆಗ ಅವರು ಅವರ್ಣನೀಯವಾದ ಆನಂದದಲ್ಲಿ ಮುಳುಗಿಹೋದರು. ಆಗ ತೋರಿಕೊಂಡ ದಿವ್ಯಪ್ರಕಾಶದಲ್ಲಿ ಅನೇಕಾನೇಕ ದೇವದೇವಿಯರ ಚಿತ್ರಗಳನ್ನು ಅವರು ಕಂಡರು. ತಾನಾರು, ಎಲ್ಲಿದ್ದೇನೆ ಎಂಬುದೆಲ್ಲವೂ ಅವರಿಗೆ ಮರೆತುಹೋಯಿತು. ಅದೆಷ್ಟೋ ಹೊತ್ತಿನ ಬಳಿಕ ಪರಮಹಂಸರು ಮತ್ತೆ ಅವರನ್ನು ತಲೆಯಿಂದ ಪ್ರಾರಂಭಿಸಿಕೊಂಡು ಹೊಕ್ಕುಳಿನವರೆಗೆ ಮೃದುವಾಗಿ ತಟ್ಟಿದರು. ಸುಬೋಧಾನಂದರು ಪ್ರಜ್ಞೆಮರಳಿ ಕಣ್ಣುತೆರೆದಾಗ ಪರಮಹಂಸರು "ಖೋಕಾ, ನಿನಗೆ ಅದೆಷ್ಟು ಸುಲಭವಾಗಿ ಏಕಾಗ್ರತೆ ಸಿದ್ಧಿಸಿತಪ್ಪಾ" ಎಂದು ಮೆಚ್ಚಿಕೊಂಡರು.

**ನಾನು ಬೆಳಕಿನ ಮೂಲವನ್ನೇ ಪಡೆಯಬೇಕು:** ಒಂದು ದಿನ ಸುಬೋಧಾನಂದರು ಪರಮಹಂಸರನ್ನು ಕುರಿತು "ಮಹಾರಾಜ್, ನನಗೆ ಭೂತಗಳೆಂದರೆ ಭಯ, ಏನು ಮಾಡಲಿ?" ಎಂದು ಕೇಳಿದರು. ಪರಮಹಂಸರು ತಡಮಾಡದೆ ತಮ್ಮ ಹೆಬ್ಬೆರಳನ್ನು ಅವರ ಹುಬ್ಬುಗಳ ಮಧ್ಯಕ್ಕೆ ಊರಿದರು. ಕಣ್ಣುಮುಚ್ಚಿದ ಅವರಿಗೆ ಮೃದುವಾದ ಬೆಳಕೊಂದು ಕಾಣಿಸಿಕೊಂಡು, ಅದರ ಫಲವಾಗಿ ಭೂತಭಯ ಸಂಪೂರ್ಣವಾಗಿ ಅಳಿದುಹೋಯಿತು. ಅಷ್ಟುಮಾತ್ರವಲ್ಲದೆ ಕಣ್ಣುಮುಚ್ಚಿದಾಗ ಆಗಾಗ ಅದೇ ಮೃದುವಾದ ಬೆಳಕು ಅವರಿಗೆ ಪ್ರತ್ಯಕ್ಷವಾಗುತ್ತಿತ್ತು. ಅದನ್ನು ತಮ್ಮ ತಾಯಿಗೂ ಹೇಳಿದರು. ಆಗ ತಾಯಿಯು, "ನೀನು ಅದೃಷ್ಟವಂತ. ಬೆಳಕಿನ ವಿಚಾರ ಯಾರಿಗೂ ಹೇಳಬೇಡ. ಹೇಳಿದರೆ ಬೆಳಕು ಆಮೇಲೆ ಕಾಣದಂತಾಗುತ್ತದೆ" ಎಂದಳು. ಆಗ ಸುಬೋಧಾನಂದರು "ನನಗೇನೂ ಆ ಬೆಳಕು ಬೇಡ, ಆ ಬೆಳಕು ಎಲ್ಲಿಂದ ಬರುತ್ತಿದೆಯೋ ಆ ವಸ್ತುವನ್ನೇ ನಾನು ಪಡೆದುಕೊಳ್ಳಬೇಕು" ಎಂಬ ಅಧ್ಯಾತ್ಮರಹಸ್ಯದ ಅದ್ಭುತವಾದ ಮಾತನ್ನೇ ಹೇಳಿದರು.

೧೮೮೬ ಆಗಸ್ಟ್ ೧೬ರಂದು ಪರಮಹಂಸರು ಮಹಾಸಮಾಧಿಯನ್ನೈದಿದರು. ಆ ಸಂಕಟವನ್ನು ಸಹಿಸಿಕೊಳ್ಳಲಾರದೆ ಸುಬೋಧಾನಂದರು ಗೊಳೋ ಎಂದು ಅತ್ತುಬಿಟ್ಟರು. ಆಮೇಲೆ ಪ್ರಜ್ಞಾಹೀನರಾಗಿ ಉರುಳಿಕೊಂಡುಬಿಟ್ಟರು. ಶೈತ್ಯೋಪಚಾರದಿಂದ ಅವರನ್ನು ಮೇಲೆ ಎಬ್ಬಿಸಬೇಕಾಯಿತು. ಗುರುವಿಲ್ಲದ ಜಗತ್ತು ಅವರಿಗೆ ಸೆರೆಮನೆಯಂತೆ ಭಾಸವಾಯಿತು. ಮನಶ್ಶಾಂತಿಗಾಗಿ ವಾರಾಣಸಿಯ ಯಾತ್ರೆ ಮಾಡಿಕೊಂಡು ಬಂದರು. ವರಾಹನಗರದ ಮಠಕ್ಕೆ ಮರಳಿಬಂದು ಶಾಸ್ತ್ರೋಕ್ತವಾಗಿ ಸಂನ್ಯಾಸವನ್ನು ಸ್ವೀಕರಿಸಿ ಸುಬೋಧಚಂದ್ರರಾಗಿದ್ದವರು ಸುಬೋಧಾನಂದರೆನಿಸಿದರು; ಪರಮಹಂಸಜಗತ್ತಿನ ಆನಂದಚಂದ್ರರಾಗಿಬಿಟ್ಟರು.

**ಭಾಷಣದಿಂದ ಭೂಕಂಪ :** ೧೮೯೭ ರಲ್ಲಿ ಸ್ವಾಮಿ ವಿವೇಕಾನಂದರು ಪಶ್ಚಿಮದೇಶಗಳಿಂದ ಹಿಂತಿರುಗಿ ಬಂದು, 'ರಾಮಕೃಷ್ಣ ಮಿಷನ್' ಸ್ಥಾಪಿಸಿದರು. ಅದರ ಮೂಲಕ ಲೋಕಸೇವಾಕಾರ್ಯಗಳನ್ನು ಮಾಡಬೇಕೆಂದು ತಮ್ಮ ಗುರುಭಾಯಿಗಳನ್ನು

ಕೋರಿಕೊಂಡರು. ಅದರ ಅಂಗವಾಗಿ ಅವರನ್ನೆಲ್ಲ ಭಾಷಣಕಾರರಾಗುವಂತೆಯೂ ಅಣಿಗೊಳಿಸಲು ಆಸೆಪಟ್ಟರು. ಸರದಿಯ ಪ್ರಕಾರ ಸಂನ್ಯಾಸಿಗಳು ಆಲಂಬಜಾರ್ ಮಠದಲ್ಲಿ ಗುರುಭಾಯಿಗಳ ಸಮ್ಮುಖದಲ್ಲಿ ಉಪನ್ಯಾಸ ಮಾಡಬೇಕೆಂದು ಸೂಚಿಸಿದರು. ಸುಬೋಧಾನಂದರು ಅದರಿಂದ ತಪ್ಪಿಸಿಕೊಳ್ಳಲು ಶತಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲಿಲ್ಲ. ಆದರೆ ಅಂದು ಅವರು ಭಾಷಣಮಾಡಲು ಬಾಯಿತೆರೆಯುತ್ತಿದ್ದಂತೆಯೇ '೧೮೯೭ರ ಜೂನ್ ೧೨ರ ಘೋರ ಭೂಕಂಪ' ಎಂದು ವರ್ಣಿತವಾದ ಭೂಕಂಪವು ಆ ಕ್ಷಣಕ್ಕೆ ನಡೆದುಹೋಯಿತು. ಕಟ್ಟಡಗಳೆಲ್ಲ ನಡುಗಿಹೋದುವು, ಹೊರಗೆ ವೃಕ್ಷಗಳು ಬುಡಸಹಿತ ಉರುಳಿಬಿದ್ದವು, ಸಭೆ ಚದುರಿಹೋಯಿತು. ತರುವಾಯದಲ್ಲಿ ವಿವೇಕಾನಂದರು "ನಿನ್ನ ಭಾಷಣ ಅದ್ಭುತವಾಗಿತ್ತು ಖೋಕಾ, ನೀನು ಭೂಮಂಡಲವನ್ನೇ ನಡುಗಿಸಿಬಿಟ್ಟೆ" ಎಂದು ಹೇಳಿದಾಗ ಉಂಟಾದ ಹಾಸ್ಯರಸದಲ್ಲಿ ಖೋಕಾ ಸಹಿತವಾಗಿ ಎಲ್ಲರೂ ಕೊಚ್ಚಿಹೋದರು.

ಸುಬೋಧಾನಂದರು ಸಂಕೋಚಶೀಲರಾಗಿ ಭಕ್ತೆಯರಿಂದ ದೂರದೂರವೇ ಇದ್ದುಬಿಡುತ್ತಿದ್ದರು. ಅದನ್ನು ಕಂಡ ವಿವೇಕಾನಂದರು "ಅವರೆಲ್ಲ ಜಗನ್ಮಾತೆಯ ಆವಿರ್ಭಾವಗಳು, ಅವರನ್ನು ನಿನ್ನ ತಾಯಿಯಂತೆಯೋ ಸೋದರಿಯಂತೆಯೋ ತಿಳಿದುಕೋ, ರಾಮಕೃಷ್ಣರ ವಿಚಾರಗಳನ್ನು ತಿಳಿದುಕೊಳ್ಳಲು ಬರುವ ಅವರೊಡನೆ ಪ್ರೀತಿಯಿಂದ ಮಾತನಾಡಬೇಕು" ಎಂದು ತಿಳಿಯಹೇಳಿದರು. ಆಮೇಲೆ ಸುಬೋಧಾನಂದರು ಸ್ತ್ರೀಯರನ್ನು 'ಮಾಯಿ' ಎಂದು ಸಂಬೋಧಿಸುತ್ತ ಅವರೊಡನೆ ಮಾತುಕತೆಯಾಡುತ್ತಿದ್ದರು. ವಿದೇಶೀಭಕ್ತೆಯರು ಮಠಕ್ಕೆ ಬಂದಾಗ "ನನಗೆ ಇಂಗ್ಲೀಷ್ ಸರಿಯಾಗಿ ಬರುವುದಿಲ್ಲ, ಅವರ ಸಹವಾಸ ನನಗೆ ಬೇಡ" ಎಂದು ಹೇಳಿಬಿಟ್ಟರು. ಆಗಲೂ ವಿವೇಕಾನಂದರು ಸುಮ್ಮನೆ ಬಿಡಲಿಲ್ಲ. "ನೀನೇನೂ ತಲೆಕೆಡಿಸಿಕೊಳ್ಳಬೇಡ. ನೀನು ಮಾಡುವ ಪ್ರತಿಯೊಂದು ಉಪಕಾರಕ್ಕೂ ಅವರು ಪದೇಪದೇ 'ಥ್ಯಾಂಕ್ಯೂ' ಎನ್ನುತ್ತಿರುತ್ತಾರೆ; ನೀನು ಪ್ರತಿಯಾಗಿ 'ಐ ಡೋಂಟ್ ಕೇರ್' ಎನ್ನುತ್ತಿರು" ಎಂದು ಹೇಳಿಕೊಟ್ಟರು. ಅದೂ ನಿಜವೇನೋ ಎಂದುಕೊಂಡು ಸುಬೋಧಾನಂದರು ಹಾಗೆಯೇ ಹೇಳುತ್ತಿದ್ದರು. ಆ ಭಕ್ತೆಯರಿಗೆಲ್ಲ ಮೊದಲಿಗೆ "ಇದೇನು ವಿಚಿತ್ರ ವರ್ತನೆಯಪ್ಪಾ" ಎಂದೆನಿಸಿತು. ಆದರೆ ಅದೆಲ್ಲಾ ವಿವೇಕಾನಂದರು ಎಬ್ಬಿಸಿರುವ ಹಾಸ್ಯಲಹರಿ ಎಂದು ತಿಳಿದಾಗ ಅವರೆಲ್ಲ ಹೊಟ್ಟೆಹುಣ್ಣಾಗುವಂತೆ ಉರುಳಾಡಿ ನಕ್ಕರು.

ಸುಬೋಧಾನಂದರಿಗೆ ಬಾಲ್ಯದಿಂದಲೂ ಟೀ ಎಂದರೆ ಪಂಚಪ್ರಾಣ. ಒಂದು ದಿನ ಧ್ಯಾನಕ್ಕೆ ಕುಳಿತಿದ್ದ ವಿವೇಕಾನಂದರು ನಡುರಾತ್ರಿಯಲ್ಲಿ ನಿದ್ರೆಯಲ್ಲಿದ್ದ ಸುಬೋಧಾನಂದರನ್ನೆಬ್ಬಿಸಿ "ನನಗೆ ಸ್ವಲ್ಪ ಗುಡುಗುಡಿ ಸೇದಲು ತಂದುಕೊಡುತ್ತೀಯಾ" ಎಂದು ಕೇಳಿದರು. ಸುಬೋಧಾನಂದರಾದರೋ ಕೊಂಚವೂ ಬೇಸರಿಸಿಕೊಳ್ಳದೆ ತಕ್ಷಣವೇ ಅಣಿಮಾಡಿ ತಂದುಕೊಟ್ಟರು. ಅದರಿಂದ ಪ್ರಸನ್ನರಾದ ವಿವೇಕಾನಂದರು ತಾವೇ ಬಲವಂತಪಡಿಸಿ, "ನನ್ನಿಂದ ಏನಾದರೂ ವರವನ್ನು ಕೇಳಿಕೋ, ಖೋಕಾ" ಎಂದರು. ಬೇರೆ ದಾರಿ ಕಾಣದೆ ಸುಬೋಧಾನಂದರು "ನನ್ನ ಜೀವಿತಾವಧಿಯಲ್ಲಿ ನನಗೆ ಪ್ರಿಯವಾಗಿರುವ ಟೀ ಪಾನೀಯವು ಯಾವ ದಿನಕ್ಕೂ ತಪ್ಪದಿರಲಿ, ಅದೇ ನಾನು ಕೇಳಿಕೊಳ್ಳುವ ವರ" ಎಂದರು. ಆ ವರವು ತಪ್ಪದೆ ಫಲಿಸಿತೆಂಬುದೂ ಅಚ್ಚರಿಯೇ ಸರಿ. ಬೆಳಗಿನಿಂದ ಟೀ ಸಿಗಲಿಲ್ಲವೆಂದಾದರೂ ಸುಬೋಧಾನಂದರು ರಾತ್ರಿ ಮಲಗುವ ಮುನ್ನವಾದರೂ ಅನಿರೀಕ್ಷಿತವಾಗಿ ಟೀ ಅವರ ಕೈಸೇರುತ್ತಿತ್ತು.

**ಲೋಕಸೇವಾನಿರತ:** ೧೯೦೮ರಲ್ಲಿ ಒರಿಸ್ಸಾದ ಚಿಲ್ಕಾ ಎಂಬ ಪ್ರದೇಶದಲ್ಲಿ ಭೀಕರವಾದ ಕ್ಷಾಮವು ತಲೆದೋರಿತು. ಆಗ ಸುಬೋಧಾನಂದರು ಅಲ್ಲಿನ ಸೇವಾಕಾರ್ಯಗಳಿಗೆ ತಮ್ಮನ್ನು ಸಮರ್ಪಿಸಿಕೊಂಡರು. ಊರೂರು ಅಲೆದು ಉಳ್ಳವರಿಂದ ಆಹಾರಧಾನ್ಯಗಳನ್ನೂ ಬಟ್ಟೆಬರೆಗಳನ್ನೂ ಸಂಗ್ರಹಿಸಿತಂದು, ದೀನದಲಿತರಿಗೆ ಹಂಚಿಕೊಟ್ಟು, ಪ್ರಾಣಗಳನ್ನು ಕಾಪಾಡಿದರು. ತಮ್ಮ ಆಹಾರನಿದ್ರೆಗಳತ್ತ ಗಮನಹರಿಸದೆ ಅಹರ್ನಿಶಿ ದುಡಿದುದರ ಪರಿಣಾಮವಾಗಿ ಅನಾರೋಗ್ಯ ಪೀಡಿತರಾದರು. ಆದರೂ ಅಲ್ಲಿನ ಬರಗಾಲ ಪರಿಸ್ಥಿತಿ ಹತೋಟಿಗೆ ಬರುವವರೆಗೆ ಅವರು ತಮ್ಮ ಸೇವಾಕಾರ್ಯಗಳನ್ನು ನಿಲ್ಲಿಸಲಿಲ್ಲ.

ತಮ್ಮ ದೇಶಾಟನೆಯ ಕಾಲದಲ್ಲಿಯೂ ಸುಬೋಧಾನಂದರು ತಮ್ಮ ಶಕ್ತಿಮೀರಿ ಭಕ್ತೋದ್ಧಾರ ಕಾರ್ಯಗಳನ್ನು ಸಂಪನ್ನಗೊಳಿಸಿದರು. ಬಡವರೆನ್ನದೆ ಬಲ್ಲಿದರೆನ್ನದೆ ಹಿರಿಯರೆನ್ನದೆ ಕಿರಿಯರೆನ್ನದೆ ಬೇಡಿಬಂದವರಿಗೆಲ್ಲ ದೀಕ್ಷೆಯನ್ನಿತ್ತು, ಸೂಕ್ತ ರೀತಿಯಲ್ಲಿ ಮಾರ್ಗದರ್ಶನ ಮಾಡಿದರು. ಹಲವುಕಡೆ ತಮ್ಮ ಉಪನ್ಯಾಸಗಳ ಮೂಲಕ ಆಧ್ಯಾತ್ಮಿಕ ಜಾಗೃತಿಯನ್ನುಂಟುಮಾಡಿದರು. ತಮ್ಮಲ್ಲಿಗೆ ಮಾರ್ಗದರ್ಶನಕ್ಕೆಂದು ಬರುತ್ತಿದ್ದ ಭಕ್ತರಿಗೆ ಪರಮಾತ್ಮನು ನಮ್ಮೆಲ್ಲರ ಕ್ಷೇಮಸಮಾಚಾರದ ಹೊಣೆಯನ್ನು ಹೇಗೆ ಹೊತ್ತಿದ್ದಾನೆ ಎಂಬುದನ್ನು ಮನವರಿಕೆ ಮಾಡಿಕೊಡಲು ವೈಷ್ಣವಸಂತರಾದ ಶ್ರೀಧರಸ್ವಾಮಿಗಳೆಂಬ ಮಹಾತ್ಮರ ಜೀವನಕಥೆಯೊಂದನ್ನು ತಪ್ಪದೆ ಹೇಳುತ್ತಿದ್ದರು. ಗೃಹಸ್ಥರಾಗಿದ್ದ ಶ್ರೀಧರಸ್ವಾಮಿಗಳ ಮಡದಿ ಒಂದು ಮಗುವಿಗೆ ಜನ್ಮನೀಡಿ, ಆಗಲೇ ತೀರಿಕೊಂಡುಬಿಟ್ಟರು. ಆಗ ಉಂಟಾದ ದುಃಖದ ಆವೇಗದಿಂದ ಶ್ರೀಧರಸ್ವಾಮಿಗಳು ವೈರಾಗ್ಯಪರರಾಗಿ ಸಂನ್ಯಾಸವನ್ನು ಸ್ವೀಕರಿಸಲು ನಿರ್ಧರಿಸಿದರು. ಆದರೆ ಆ ಮಗುವಿನ ಮುಖವನ್ನು ನೋಡಿದಾಗ "ಅಯ್ಯೋ, ಈ ಹಸುಗೂಸನ್ನು ಯಾರು ಕಾಪಾಡುತ್ತಾರೆ " ಎಂಬ ಸಂಕಟ ಉಕ್ಕಿಬಂದಿತು. ಆ ಕ್ಷಣಕ್ಕೆ ಸರಿಯಾಗಿ ಮನೆಯ ಛಾವಣಿಯಿಂದ ಹಲ್ಲಿಯ ಮೊಟ್ಟೆಯೊಂದು ನೆಲಕ್ಕೆ ಬಿದ್ದು ಇಬ್ಭಾಗವಾಯಿತು. ಅದರೊಳಗಿಂದ ಮರಿಯೊಂದು ಹೊರಕ್ಕೆ ಜಿಗಿಯಿತು. ಅದೇ ಕ್ಷಣಕ್ಕೆ ಸಣ್ಣನೊಳ್ಳೆಯೊಂದು ಅದರ ಮುಂದೆ ಹಾರಿಬಂತು. ಹಲ್ಲಿಯ ಮರಿ ಒಡನೆಯೇ ತನಗೆ ಆಹಾರ ಸಿಕ್ಕಿತೆಂದು